

ಚೆಷ್ಟೋಶೋವ ನಗರದಲ್ಲಿ ನಿತ್ಯವೂ ಪ್ರವಾಸಿಗರ ಹಬ್ಬ!



ಸಂಜೆಗಣ್ಣಿನಲ್ಲಿ ವಾರ್ಸಾ ನಗರದ ವಿಹಂಗಮ ನೋಟ

ರೆಸ್ಟೋರೆಂಟ್‌ಗಳಲ್ಲಿ ಲೋಕಲ್ ಜನರೇ ಹೆಚ್ಚು ಕಂಡರು. ರಾತ್ರಿ ಹತ್ತು ಗಂಟೆಯಾದರೂ ಸೂರ್ಯ ಮನೆಗೆ ಹೋಗಿರಲಿಲ್ಲವಾದ್ದರಿಂದ, ಊಟದ ಸಮಯ ತಿಳಿಯದೆ ಹರಟೆ ಹೊಡೆಯುತ್ತಾ ಕುಳಿತು, ರೆಸ್ಟೋರೆಂಟ್ ಬಾಗಿಲು ಹಾಕಿದ್ದರಿಂದ ಅಂದಿನ ಊಟದ ಔಪಚಾರಿಕತೆ ಮುಗಿಸಿದೆವು.

ಮರುದಿನ ವಾರ್ಸಾಗೆ ಬಂದೆವು. ವಾರ್ಸಾ ಒಂದು ಸುಂದರ ನಗರ. ಸುಮಾರು ಮೂವತ್ತು ಲಕ್ಷ ಜನಸಂಖ್ಯೆಯ ನಗರ. ಸಣ್ಣ ಮೀನುಗಾರಿಕೆ ನಗರವಾಗಿದ್ದ ಈ ನಗರ, ಕ್ರೋಕೊವ್ ನಂತರ ರಾಜಧಾನಿಯಾಗಿ ಮಾನ್ಯತೆ ಪಡೆಯಿತು. ಎರಡು ಸುಸಜ್ಜಿತ ವಿಮಾನ ನಿಲ್ದಾಣಗಳು, ರಸ್ತೆ ಸಾರಿಗೆ, ಟ್ರಾಮ್‌ಗಳು, ಮೆಟ್ರೊ ರೈಲು, ಇಲ್ಲಿನ ನಗರವಾಸಿಗಳ ಜೀವನಾಡಿಗಳು. ಅತ್ಯುತ್ತಮ ರಸ್ತೆಗಳು ಮತ್ತು ಸುಸಜ್ಜಿತ ರೈಲ್ವೆ ವ್ಯವಸ್ಥೆ ದೇಶ ಸುತ್ತುವ ಪ್ರವಾಸಿಗರಿಗೆ ತುಂಬಾ ಸಹಕಾರಿ. ವಿಸ್ತುಲ ಹೆಸರಿನ ನದಿಯ ಎರಡೂ ಬದಿಗಳನ್ನು ವಿಭಿನ್ನವಾಗಿ ವಿನ್ಯಾಸಗೊಳಿಸಲಾಗಿದೆ. ನದಿಯ ಒಂದು ಬದಿಯಲ್ಲಿ ತಿಂದುಂಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬಹುದಾದರೆ, ಮತ್ತೊಂದು ದಡದಲ್ಲಿ ಅಳಿವಿನಂಚಿನಲ್ಲಿರುವ ವೈವಿಧ್ಯಮಯ ಪಕ್ಷಿಗಳನ್ನು ಕಾಣಬಹುದು.

ವಿಸ್ತುಲ ನದಿ ದಂಡೆಯಲ್ಲಿ ಸೈಕ್ಲಿಂಗ್ ಮೋಜು ಅನುಭವಿಸಬಹುದು. ಪರಿಶುದ್ಧ ನದಿಯ ದಡದಲ್ಲಿ ವಿಹರಿಸುವುದು ವಿಶಿಷ್ಟ ಅನುಭವ ನೀಡುತ್ತದೆ. ಇಲ್ಲಿನ ಮಲ್ಟಿಮೀಡಿಯಾ ಫೌಂಟನ್ ಪಾರ್ಕ್, ಸೈನ್ಸ್ ಸೆಂಟರ್, ವಾಕಿಂಗ್ ಮತ್ತು ಸೈಕ್ಲಿಂಗ್ ಪಥಗಳು... ಓಹ್! ಒಂದೇ ಎರಡೇ, ನದಿಯೊಂದರ ಪರಿಸರವನ್ನು ಹೀಗೆಲ್ಲ ಬಳಸಬಹುದೆಂದು ನೋಡಿಯೇ ತಿಳಿಯಬೇಕು.

ಮರುದಿನ ಊರು ಸುತ್ತಲಾರಂಭಿಸಿದೆವು. ಮೊದಲಿಗೆ ಓಲ್ಡ್ ಟೌನ್‌ನಲ್ಲಿರುವ ಪೇಟೆಗೆ ಹೋದೆವು. ಅದು ಯುನೆಸ್ಕೋದ ವರ್ಲ್ಡ್ ಹೆರಿಟೇಜ್ ಸೆಂಟರ್‌ಗಳಲ್ಲೊಂದು ಎನ್ನುವ ಮನ್ನಣೆಗೆ ಪಾತ್ರವಾಗಿರುವ ಸ್ಥಳ. ಯೂರೋಪ್‌ನ ಬೇರೆ ದೇಶಗಳಲ್ಲಿನ ಕೋಟೆ ಕೊತ್ತಲಗಳಿಗೆ ಹೋಲಿಸಿದರೆ ಇದು ಸ್ವಲ್ಪ ಯಂಗ್ ಸಿಟಿ. ಶಾಪಿಂಗ್ ಪ್ರಿಯರ ನೆಚ್ಚಿನ ನ್ಯೂ ವರ್ಲ್ಡ್ ಸ್ಟ್ರೀಟ್, ಸೇಂಟ್ ಅನ್ನೆ ಚರ್ಚ್, ಹೋಲಿ ಕ್ರಾಸ್ ಚರ್ಚ್, ಕಾರ್ಮೆಲಿ ಚರ್ಚ್, ರಾಜ ಮಹಾರಾಜರ ನಿವಾಸವಾಗಿದ್ದ ವಿಲಾನೋ ಪ್ಯಾಲೇಸ್ ಕಡೆಗೆ ಕಣ್ಣು ಹಾಯಿಸಿ 'ಕ್ಯಾಸಲ್ ಸ್ಕ್ವೇರ್'ಗೆ ಬಂದೆವು. ಜನಜಂಗುಳಿಯಲ್ಲಿ ನಡೆದಾಡಿ ಬಂದಿದ್ದರ ಕುರುಹಾಗಿ ಸೆಲ್ಫಿ ಕ್ಲಿಕ್ಕಿಸಿಕೊಂಡೆವು. ನಂತರ ಅಲ್ಲಿನ ಸುಪ್ರಸಿದ್ಧ 'ಅಂಬರ್ ಆಭರಣ ಮಳಿಗೆ'ಗೆ ಹೋಗಿ, ಸುಮಾರು 20–40 ದಶಲಕ್ಷ ವರ್ಷಗಳಷ್ಟು ಹಳೆಯದೆನ್ನಲಾದ ಕಲ್ಲಿಗೆ ಬೆಳ್ಳಿ ಮತ್ತು ಚಿನ್ನದ ಸಿಂಗಾರದೊಂದಿಗೆ ರೂಪಿಸಿದ ಆಭರಣವನ್ನು ಕೊಂಡೆವು.

ಎಲ್ಲಾ ಚಳಿ ರಾಷ್ಟ್ರಗಳಂತೆ ಪೋಲೆಂಡ್‌ನಲ್ಲಿಯೂ ವೋಡ್ಕಾ ಜನಪ್ರಿಯ ಪೇಯ. ಲೋಕಲ್ ಫ್ಲೇವರ್‌ನ ವಿಶೇಷ ಬಿಯರ್‌ಗಳೂ ಪ್ರಸಿದ್ಧ. ಟ್ರಿಪಲ್ ಸೂಪ್ ಮತ್ತು ಚಾಕೊಲೇಟ್ ಕ್ರೀಮ್ ಪೈಗಳು ಅಲ್ಲಿ ಅಚ್ಚುಮೆಚ್ಚು. 'ಪೋಲೆಂಡ್‌ನಲ್ಲಿ ತಿನ್ನು, ಹಂಗೇರಿಯಲ್ಲಿ ಕುಡಿ, ಜರ್ಮನಿಯಲ್ಲಿ ಮಲಗು ಮತ್ತು ಇಟಲಿಯಲ್ಲಿ ಪ್ರೀತಿಸು' ಎನ್ನುತ್ತದೆ ಒಂದು ಪೋಲಿಶ್ ನಾಣ್ಣುಡಿ. ಆ ಮಾತನ್ನು ನಿಜ ಮಾಡುವಂತೆ ಪೋಲೆಂಡ್ ಖಾದ್ಯಪ್ರಿಯರಿಗೆ ಅಪಾರ ಆಯ್ಕೆಗಳನ್ನು ನೀಡುವ ಸ್ಥಳ.

ಪ್ರತಿಕ್ರಿಯಿಸಿ: **feedback@sudha.co.in**